ಸಾಕ್ಷಿಗೆ ಪ್ರಮಾಣ ವಚನವನ್ನು ದಿ:05-12-2025 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಮಾನ್ಯ ಎ ಜಿ ಪಿ ರವರಿಂದ

11. ನನ್ನ ಅಜ್ಜ ಶಿವಲಿಂಗಪ್ಪ ಮುತ್ತಪ್ಪ ಗೌಡರವರು 2010 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ಶಿವಲಿಂಗಪ್ಪ ಮುತ್ತಪ್ಪ ಗೌಡರವರ ಮಕ್ಕಳ ನಡುವೆ ನಮ್ಮ ಕುಟುಂಬದ ಆಸ್ತಿಗಳು ಯಾವಾಗ ವಿಭಾಗ ಆಗಿರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಗೆ ದಾವಾಸ್ತಿ ಮತ್ತು ಇತರೆ ಸರ್ವೆ ನಂಬರಗಳಲ್ಲಿ ಆಸ್ತಿಗಳು ಬಂದಿದ್ದವು.

12. ದಾವಾ ಸರ್ವೆ ನಂಬರ 336 ರಲ್ಲಿ ಒಟ್ಟು ವಿಸ್ತೀರ್ಣ 9 ಎಕರೆ 12 ಗುಂಟೆ ಕ್ಷೇತ್ರ ಇರುತ್ತದೆ ಎಂದರೆ ಸರಿ. ಸದರಿ ದಾವಾ ಸರ್ವೆ ನಂ 336/1 ರಲ್ಲಿ 2 ಎಕರೆ 28 ಗುಂಟೆ ಕ್ಷೇತ್ರ ನನ್ನ ತಂದೆಗೆ ಬಂದಿರುತ್ತದೆ. ನನ್ನ ಚಿಕ್ಕಪ್ಪ ಗುರುವಯ್ಯ ಶಿವಲಿಂಗಪ್ಪ ಗೌಡರವರಿಗೆ ದಾವಾ ಸರ್ವೆ ನಂ 336 ರಲ್ಲಿ 4 ಎಕರೆ ಕ್ಷೇತ್ರ ಬಂದಿರುತ್ತದೆ. ನನ್ನ ದೊಡ್ಡಪ್ಪ ರಾಜಶೇಖರ ಶಿವಲಿಂಗಪ್ಪ ಗೌಡರವರಿಗೆ ದಾವಾ ಸರ್ವೆ ನಂ 336 ರಲ್ಲಿ 2 ಎಕರೆ 15 ಗುಂಟೆ ಕ್ಷೇತ್ರ ಬಂದಿರುತ್ತದೆ. ಸದರಿ ವಿಭಾಗದ ಸಮಯದಲ್ಲಿ ದಾವಾ ಸರ್ವೆ ನಂ 336 ಮತ್ತು ಇತರೆ ಜಮೀನುಗಳನ್ನು ಸರ್ವೆ ಮಾಡಿಸಿ ವಿಭಾಗ ಮಾಡಿಕೊಂಡಿರುತ್ತಾರೆ. ಆ ಬಗ್ಗೆ ನಕ್ಷೆ ಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

13. ನಿ.ಪಿ-17 ದಾವಾ ಸರ್ವೆ ನಂ 336 ಕ್ಕೆ ಸಂಬಂದಿಸಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಬೇರೆ ಆಸ್ತಿಗಳು ಇರುತ್ತವೆ. ಅವುಗಳು ಈಗಲೂ ಸಹ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ.

14. ದಾವಾಸ್ತಿ ನನ್ನ ಹೆಸರಿನಲ್ಲಿ ಇರುತ್ತದೆ. ದಾವಾ ಸರ್ವೆ ನಂ 336/4 ರಲ್ಲಿ 25 ಗುಂಟೆ ಕ್ಷೇತ್ರ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ.

15. ದಾವಾ ಸರ್ವೆ ನಂ 336/5 ರ ಮೂಲ ಸರ್ವೆ ನಂ 336 ಆಗಿರುತ್ತದೆ ಎಂದರೆ ಸರಿ. ದಾವಾ ಸರ್ವೆ ನಂ 336/5 ಮತ್ತು 336/1 ಪ್ರತ್ಯೇಕವಾಗಿ ಬೇರೇ ಬೇರೇ ಕಡೆ ಇರುತ್ತದೆ. ದಾವಾಸ್ತಿಗೆ ಸಂಬಂದಿಸಿದಂತೆ ಹದ್ದು ಬಸ್ತ ನಾಕಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

16. ದಾವಾಸ್ತಿಗೆ ಸಂಬಂದಿಸಿದಂತೆ ದಾವಾಸ್ತಿಯ ಚತುರ್ಗಡಿ ನನಗೆ ಗೊತ್ತು. ದಾವಾಸ್ತಿ ಸರ್ವೆ ನಂ 336/1 ರಲ್ಲಿ ಬರುತ್ತದೆ ಎಂಬುದರ ಬಗ್ಗೆ ಯಾವುದೇದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

17. ಹಂಜಕ್ಕಿ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಹಂಜಕ್ಕಿ ಯನ್ನು ಹೊರತುಪಡಿಸಿ ಬೇರೇ ಯಾವುದೇ ಶಾಲೆ ಇರುವುದಿಲ್ಲ. ಸದರಿ ಶಾಲೆಯನ್ನು ಯಾರು ಕಟ್ಟಿಸಿರುತ್ತಾರೆ ಎಂದು ನನಗೆ ಈಗ

ಹೇಳಲು ಆಗುವುದಿಲ್ಲ. ಸದರಿ ಶಾಲೆಯನ್ನು ಸರ್ಕಾರದ ಅನುಧಾನದ ಮೂಲಕ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

18. ದಾವಾಸ್ತಿಯಲ್ಲಿ ಈಗ ಸದರಿ ಶಾಲೆನಡೆಯುತ್ತಿಲ್ಲ. ದಾವಾಸ್ತಿಯಲ್ಲಿ ಅಂಗನವಾಡಿ ಈಗಲೂ ಸಹ ಕಾರ್ಯನಿರ್ವಹಿಸುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇರೇ ಕಟ್ಟಡದಲ್ಲಿ ನಡೆಯುತ್ತಿದೆ ಎಂದು ನುಡಿಯುತ್ತಾರೆ.

19. ದಾವಾಸ್ತಿಯಲ್ಲಿರುವ ಕಟ್ಟಡ ಶಿರಳಗಿ ಗ್ರಾಮ ಪಂಚಾಯತ ಸುಪರ್ದಿಯಲ್ಲಿ ಇರುತ್ತದೆ.

20. ನಿ.ಪಿ–16 ರ ಪ್ರಕಾರ ದಾವಾಸ್ತಿಯಲ್ಲಿರುವ ಶಾಲೆ ಪ್ರಸ್ತುತ ಶಿಶು ಅಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿ ಇರುತ್ತದೆ. ಸದರಿ ಶಾಲೆ ಪ್ರಸ್ತುತ ಶಿಶು ಅಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿ ಇರುವುದರಿಂದ ಸದರಿ ಇಲಾಖೆಯವರು ಈ ಪ್ರಕರಣದಲ್ಲಿ ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ಸದರಿ ಶಿಶು ಅಭಿವೃದ್ಧಿ ಇಲಾಖೆಯನ್ನು ಈ ಪ್ರಕರಣದಲ್ಲಿ ಉದ್ದೇಶ ಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

21. ಹಂಜಕ್ಕಿ ಗ್ರಾಮದಲ್ಲಿ ಜಮೀನುಗಳ ಬೆಲೆ ಜಾಸ್ತಿ ಆಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಂಜಕ್ಕಿ ಗ್ರಾಮದಲ್ಲಿ ಬೇರೆ ಯಾವುದೇ ಶಾಲೆಗಳು ಇರುವುದರಿಂದ ದಾವಾ ಸರ್ವೆ ನಂ 336/1 ರಲ್ಲಿ 3.5 ಗುಂಟೆ ಕ್ಷೇತ್ರವನ್ನು ನಮ್ಮ ಕುಟುಂಬದ ಹಿರಿಯರು ನಮ್ಮ ಗ್ರಾಮದ ಮಕ್ಕಳಿಗೆ ಅನೂಕೂಲ ಆಗಲಿ ಎಂದು ಶಾಲೆ ನಿರ್ಮಿಸಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಂಜಕ್ಕಿ ಗೆ ದೇಣಿಗೆಯಾಗಿ ದಾನವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

22. 2008 ರಲ್ಲಿ ಸದರಿ ಶಾಲೆಯ ಮುಖ್ಯೋಪಾದ್ಯಾಯರು ಸದರಿ ಶಾಲೆಯ ಜಮೀನನ್ನು ಅಳತೆ ಮಾಡಿಕೊಡಲು ಸರ್ವೆ ಇಲಾಖೆಗೆ ಅರ್ಜಿ ನೀಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

23. ಸದರಿ ಶಾಲೆ ದಾನವಾಗಿ ನೀಡಿರುವ ಆಸ್ತಿಗೆ ಸಂಬಂದಿಸಿದಂತೆ ನೊಂದಣಿ ಮತ್ತು ಅಳತೆ ಮಾಡಿಸಲು ಸಂಬಂದಪಟ್ಟ ಇಲಾಖೆಗೆ ಸದರಿ ಶಾಲೆಯ ಮುಖ್ಯೋಪಾದ್ಯಾಯರು ಮತ್ತು ನನ್ನ ತಂದೆ ಸಾಕಷ್ಟು ಬಾರಿ ಅರ್ಜಿ ನೀಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

24. ಸದರಿ ಶಾಲೆ ಕಟ್ಟಲು ನನ್ನ ತಂದೆ ಮತ್ತು ನನ್ನ ಅಜ್ಜ ದಾವಾಸ್ತಿಯನ್ನು ದಾನವಾಗಿ ನೀಡಿದ್ದರಿಂದ ಸದರಿ ಶಾಲೆಯನ್ನು ಕಟ್ಟುವಾಗ ಮತ್ತು ಇಲ್ಲಿಯವರೆಗೆ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.



25. ದಾವಾಸ್ತಿಯಲ್ಲಿ ಶಾಲೆ ಕಟ್ಟಡವನ್ನು ಕಟ್ಟಿದ ಬಗ್ಗೆ ಮತ್ತು ದಾವಾಸ್ತಿಯಲ್ಲಿ ಶಾಲೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನನ್ನ ತಂದೆಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ.

26. ದಾವಾ ಸರ್ವೆ ನಂ 336/1 ರಲ್ಲಿ 3.5 ಗುಂಟೆ ಕ್ಷೇತ್ರವನ್ನು ನನ್ನ ತಂದೆ ಮತ್ತು ನನ್ನ ಅಜ್ಜ ಶಾಲೆಗೆ ದಾನವಾಗಿ ನೀಡಿರುವ ವಿಷಯ ಗೊತ್ತಿದ್ದರಿಂದ ಸದರಿ ಸರ್ವೆ ನಂಬರಗೆ ಸಂಬಂದಿಸಿದಂತೆ ನಿ.ಪಿ–17 ರಂತೆ ವಿಭಾಗ ಮಾಡಿಕೊಂಡು ಸದರಿ ಶಾಲೆಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

27. ಹಂಜಕ್ಕಿ ಗ್ರಾಮದಲ್ಲಿ ಆಸ್ತಿಗಳ , ಜಮೀನುಗಳ ಮಾರುಕಟ್ಟೆ ಮೌಲ್ಯ ಹೆಚ್ಚಾಗಿರುವುದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 8 ನೇ ಪ್ರತಿವಾದಿಗಳು ಯಾವುದೇ ದಾವಾಸ್ತಿಯುನ್ನು ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ.

10 ಮತ್ತು 11 ನೇ ಪ್ರತಿವಾದಿಗಳು ಈ ದಾವೆಯಲ್ಲಿ Written statement ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**